ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾಲಯ

Dr. Manmohan Singh
Bengaluru City University

"ಜ್ಞಾನಜ್ಯೋತಿ-ಸೆಂಟ್ರಲ್ ಕಾಲೇಜು ಕ್ಯಾಂಪಸ್" ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು – 560001
Ph.No.080-22961016/22131385 E-Mail ID: registrar@bcu.ac.in

**Ref. No.: Dr.MS BCU/ACA/Affl.LIC-26-27/ /2025-26** **Date: 13.01.2026**

# CIRCULAR

**Sub:** Guidelines to the Local Inquiry Committees for On-site Inspection for the Academic Year **2026–27** – Reg.

**Ref:** 1. University Notification of even No. BCU/ACA/Aff/03/2025–26/136, dated: 06.11.2025
2. Approval of the Hon'ble Vice-Chancellor dated: 14.01.2026.

*********

The following guidelines are issued for the information and guidance of the **Local Inquiry Committees (LICs)** for the Academic Year **2026–27**:

1. The Local Inquiry Committees are requested to schedule and conduct their college visits before the last date notified by the University for the Academic Year 2026–27 for submission of report.
2. The Local Inquiry Committees shall examine all aspects of affiliation proposals submitted by the Institution/Society for:
   - establishment of new colleges, and
   - extension/continuation of affiliation to existing courses.

   The Committee shall primarily examine the financial position, academic feasibility, and physical as well as academic infrastructure vis-à-vis the courses proposed. The key objective of the LIC is to enhance quality, equity, objectivity, transparency, and academic integrity in the higher education system. The Committees shall submit the inspection report along with observations and remarks on the **same day of the visit**.
3. The LIC shall carefully verify and ascertain the values/responses furnished against each parameter in the Self-Assessment Report (SAR) of the college. Wherever the values/responses differ from the observed facts/figures, the correct values/responses shall be uploaded on the affiliation portal by the Committee through the Chairman's login credentials, with the assistance of the supporting staff accompanying the Committee.

   After uploading all observed values, the LIC Assessment Report shall be downloaded and **three copies** shall be printed. The Chairman and Members of the LIC, along with the Principal of the college (in case of fresh affiliation, the Principal or Head of the Management), shall sign the LIC Assessment Report. One signed copy shall be submitted to the University in a sealed cover on the same day. **Handwritten corrections on the LIC reports shall be strictly avoided.**
4. The Chairpersons and Members of the Committees are requested to assemble at the **Central College Campus (near the Registrar's Office)** and proceed for the inspection of colleges in a vehicle provided by the University. The admissible conveyance charges for commuting from residence to the Central College Campus

shall be met from the contingency amount sanctioned to the Convenor of the respective LIC.

5. The Convenors shall ensure that all expenditure is managed strictly within the amount sanctioned.
6. The Chairpersons of the Committees may, if required, co-opt a subject expert from the University Departments, not below the rank of **Associate Professor**, in consultation with the University.
7. The requests submitted by colleges for new courses and enhancement of intake through the affiliation portal shall be treated as final. The Local Inquiry Committees shall **not consider any new requests** from the Management/Colleges during the college visit.
8. The Committees shall ensure that the colleges have arranged for **video recording** of the visit of the Local Inquiry Committees. The respective colleges shall submit the video footage of the LIC visit in **DVD format** to the Chairman/Convenor of the Committee within **two days** after the visit.
9. The Chairman/President or Secretary of the College Management shall be present during the LIC visit, or a duly authorized representative of the Management shall be made available.
10. For **extension/renewal of permanent affiliation**, submission of a **valid NAAC Accreditation Certificate** is compulsory.
11. The existing colleges affiliated in previous years shall comply with the prescribed **eight (8) parameters** within a period of **two years**. If the parameters are not complied with, the affiliation may be recommended for continuation subject to fulfilment of the parameters. However, such colleges shall **not be recommended for new courses or subjects**.
12. The Local Inquiry Committees shall strictly adhere to and ensure compliance with the Government Orders **No. ED 29 UNE 2021 dated 12.02.2021 and 16.02.2021**, and **No. ED 384 UNE 2020 dated 18.02.2022**, while conducting inspections and making recommendations for affiliation. **(Copy attached.)**
13. Existing / New colleges applying for **new courses or enhancement of intake** for **BCA, BBA, and Post-Graduate programmes**, as per Government Circular No. **ED 218 UNE 2020 dated 24.08.2020(Copy attached),** shall mandatorily submit:
    - Certificate issued by the **Public Works Department (PWD)** confirming compliance with the **National Building Code**, and
    - **Fire Safety Certificate** issued by the Fire Services Department.

**For Technical Assistance:** Sri. Naveena R – +91 95386 53180
Sri. Rohith A – +91 85532 59497

**REGISTRAR**

**To:**
The Chairpersons, Members, and Convenors of the
Local Inquiry Committees – **2026–27**

**Copy to:**

1. The P.S. to the Vice-Chancellor, Registrar, Registrar (Evaluation), and Finance Officer, Dr.MS BCU – for information.
2. Website copy.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಸಂಯೋಜನೆ, ಹೊಸ ಕೋರ್ಸ್ ಪ್ರಾರಂಭ, ಸಂಯೋಜನೆ ಮುಂದುವರಿಕೆ, ಖಾಯಂ ಸಂಯೋಜನೆ ಇತ್ಯಾದಿಗಳ ಬಗ್ಗೆ ಆನ್ ಲೈನ್ ಮುಖಾಂತರ ಕ್ರಮಕೈಗೊಳ್ಳುವ ಬಗ್ಗೆ.

ಓದಲಾಗಿದೆ: 1.ಸರ್ಕಾರದ ಆದೇಶ ಸಂಖ್ಯೆ: ಇಡಿ 39 ಇಜಟಿವಿ 2015, ದಿ: 18-11-2015.
2.ಸರ್ಕಾರದ ಆದೇಶ ಸಂಖ್ಯೆ: ಇಡಿ/34/ಇಜಟಿವಿ/2020 (ಭಾಗ-2). ದಿನಾಂಕ: 22.06.2020.

****

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಸಂ (1) ದಿನಾಂಕ: 18.11.2015ರ ಆದೇಶದಲ್ಲಿ 2015-16 ನೇ ಸಾಲಿನಿಂದ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಿಗೆ ಸಂಯೋಜನೆಯನ್ನು ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ) ಯ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿರುವ ಆನ್‌ಲೈನ್ ತಂತ್ರಾಂಶದಲ್ಲಿ ಅಳವಡಿಸಿರುವ ಏಕರೂಪ ನಮೂನೆಯಲ್ಲಿಯೇ ಪ್ರಸ್ತಾವನೆಗಳನ್ನು ಪಡೆಯಬೇಕು ಹಾಗೂ ಈ ಸಂಬಂಧ ಆಯಾ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ಸೂಚಿಸಬೇಕೆಂದು, ಹಾಗೂ ಈ ಸಂಬಂಧ ಎಲ್ಲಾ ವಿಶ್ವವಿದ್ಯಾಲಯಗಳು ತಮ್ಮ login ID & Password ಮೂಲಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ login ID & Password ಸೃಜಿಸಿ, ಆಯಾ ಕಾಲೇಜುಗಳಿಗೆ ಸಂಯೋಜನೆ ಪಡೆಯುವ ಸಲುವಾಗಿ ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಭರ್ತೀ ಮಾಡುವಂತೆ ಕಾಲೇಜುಗಳಿಗೆ ಸೂಚಿಸಬೇಕೆಂದು ಮತ್ತು ಈ ತಂತ್ರಾಂಶದಲ್ಲಿ ಅಳವಡಿಸಿರುವ ಮಾಹಿತಿಯನ್ನು ವಿಶ್ವವಿದ್ಯಾಲಯ ನೇಮಿಸುವ ಸ್ಥಳೀಯ ವಿಚಾರಣಾ ಸಮಿತಿಯು ಪರಾಮರ್ಶಿಸುವಂತೆ ಹಾಗೂ ಪರಿಶೀಲಿಸಿದ ದಿನದಂದೆ ಸಮಿತಿಯು ತನ್ನ ಶಿಫಾರಸ್ಸನ್ನು ತಂತ್ರಾಂಶದಲ್ಲಿ ಆನ್‌ಲೈನ್ ಮುಖಾಂತರ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ದಿನಾಂಕ: 22.06.2020ರ ಆದೇಶದಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಿಗೆ 2019-20 ನೇ ಸಾಲಿನಲ್ಲಿ ಸಂಯೋಜನಾ ಪ್ರಕ್ರಿಯೆ ಕೈಗೊಂಡು 2020-21 ನೇ ಸಾಲಿನ Opening New Colleges, Extension of existing Affiliation, Continuation of Affiliation, Permanent Affiliation, Change /Addition of Subject, Division of Faculty, Increase of intake, Change of name, Closure & withdrawal of a College, Local Inquiry

Committee formation and Transfer of Management ಮುಂತಾದ ಕಾರ್ಯ ಚಟುವಟಿಕೆಗಳಿಗೆ ಅನುಮೋದನೆ ನೀಡುವಾಗ ಕಡ್ಡಾಯವಾಗಿ ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ) ಮುಖಾಂತರ ಉನ್ನತೀಕರಿಸಿರುವ ಆನ್‌ಲೈನ್ ತಂತ್ರಾಂಶದ ಮುಖಾಂತರವೇ ಅರ್ಜಿಗಳನ್ನು ಆಹ್ವಾನಿಸಲು ಹಾಗೂ ಭರ್ತಿ ಮಾಡಿರುವ ಅರ್ಜಿಗಳನ್ನು ಅಳವಡಿಸಿರುವ ಮಾಹಿತಿಗಳನ್ನು ವಿಶ್ವವಿದ್ಯಾಲಯವು ನೇಮಿಸುವ ಸ್ಥಳೀಯ ವಿಚಾರಣಾ ಸಮಿತಿಯು ಪರಾಮರ್ಶಿಸಿ, ಶಿಫಾರಸ್ಸನ್ನು ಆನ್‌ಲೈನ್ ಮುಖಾಂತರವೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಂತೆ ಆದೇಶಿಸಲಾಗಿತ್ತು.

ಆದರೆ, ಸಂಯೋಜನಾ ಪ್ರಕ್ರಿಯೆಯಲ್ಲಿ Opening New Colleges, Extension of existing Affiliation, Continuation of Affiliation, Permanent Affiliation, Change /Addition of Subject, Division of Faculty, Increase of intake, Change of name, Closure & withdrawal of a College, Local Inquiry Committee formation and Transfer of Management ಮುಂತಾದ ಕಾರ್ಯ ಚಟುವಟಿಕೆಗಳಿಗೆ ಅನುಮೋದನೆ ನೀಡುವಾಗ, ಕಡ್ಡಾಯವಾಗಿ ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ) ಮುಖಾಂತರ ಉನ್ನತೀಕರಿಸಿರುವ ಆನ್‌ಲೈನ್ ತಂತ್ರಾಂಶದ ಮುಖಾಂತರವೇ ಅರ್ಜಿಗಳನ್ನು ಆಹ್ವಾನಿಸಲು ಹಾಗೂ ಭರ್ತಿ ಮಾಡಿರುವ ಅರ್ಜಿಗಳನ್ನು ಅಳವಡಿಸುವ ಸಂಬಂಧದಲ್ಲಿ ಕೆಲವು ತೊಡಕುಗಳು ಇರುವುದನ್ನು ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು ಸರ್ಕಾರದ ಗಮನಕ್ಕೆ ತಂದು, ಇದರಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡುವಂತೆ ನೀಡಿದ ಸಲಹೆ ಅನುಸಾರವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 29 ಯುಎನ್ಇ 2021, ಬೆಂಗಳೂರು,**

**ದಿನಾಂಕ: 12.02.2021.**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2020-21 ಮತ್ತು 2021-22ನೇ ಸಾಲುಗಳಿಗೆ Opening New Colleges, Extension of existing Affiliation, Continuation of Affiliation, Permanent Affiliation, Change /Addition of Subject, Division of Faculty, Increase of intake, Change of name, Closure & withdrawal of a College, Local Inquiry Committee formation and Transfer of Management ವಿವಿಧ ರೀತಿಯ ಸಂಯೋಜನೆ ಪ್ರಸ್ತಾವನೆಯನ್ನು ಆನ್‌ಲೈನ್ ಮೂಲಕ ಸಲ್ಲಿಸುವಾಗ, ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಪಾಲಿಸುವಂತೆ ಆದೇಶಿಸಿದೆ.

1. 2020-21ನೇ ಸಾಲಿಗೆ ಈಗ ಇರುವ ಕೋರ್ಸ್ ಗಳು ಮತ್ತು ವಿದ್ಯಾರ್ಥಿ ಸಂಖ್ಯೆಗಳಿಗೆ ಮಾತ್ರ ಅನ್ವಯಿಸುವಂತೆ ಎಲ್ಲಾ ಸಂಯೋಜನೆಯನ್ನು ನವೀಕರಿಸಲು, ಮುಂದುರಿಸಲು ಮತ್ತು ವಿಸ್ತರಿಸಲು ವಿಶ್ವವಿದ್ಯಾಲಯಗಳು ತಮ್ಮ ಹಂತದಲ್ಲಿಯೇ ನಿಯಾಮಾನುಸಾರ ಕ್ರಮ ಕೈಗೊಳ್ಳುವುದು.

2. 2020-21ನೇ ಸಾಲಿಗೆ, ವಿದ್ಯಾರ್ಥಿ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ, ಹೊಸ ಕಾಂಬಿನೇಷನ್ ಗಳನ್ನು ನೀಡುವ ಬಗ್ಗೆ ಮತ್ತು ಹೊಸ ಕೋರ್ಸ್ ಗಳನ್ನು ಪ್ರಾರಂಭಿಸುವ ಬಗ್ಗೆ ವಿಶ್ವವಿದ್ಯಾಲಯಗಳು ನಿಯಮಾನುಸಾರ ತಮ್ಮ ಅಭಿಪ್ರಾಯಗಳೊಂದಿಗೆ ಕೂಡಲೇ ಸರ್ಕಾರಕ್ಕೆ ಸ್ಪಷ್ಟವಾದ ಶಿಫಾರಸ್ಸುಗಳನ್ನು ಕಳಿಸುವುದು. ಹಾಗೆ ಶಿಫಾರಸ್ಸು ಮಾಡುವಾಗ ಒಂದು ಬಾರಿಯ ಕ್ರಮವಾಗಿ Affiliation Score ಗಳಲ್ಲಿ ಶೇ. 5 ರಷ್ಟು ರಿಯಾಯಿತಿ ನೀಡುವುದು. ಮತ್ತು ಸಂಯೋಜನೆ ಅಂಕಗಳ ಆಧಾರದ ಮೇಲೆ ಕೆಳಕಂಡಂತೆ ಮಾನದಂಡಗಳನ್ನು ನಿಗಧಿಗೊಳಿಸುವುದು.

| ಕ್ರಮ ಸಂಖ್ಯೆ | ನಿಗಧಿಪಡಿಸಬಹುದಾದ ಸಂಯೋಜನೆಯ ರೀತಿ | ಅವಶ್ಯವಿರುವ ಕನಿಷ್ಠ ಸಂಯೋಜನಾ ಶೇಕಡ ಅಂಕಗಳು (%) (ರಿಯಾಯಿತಿ ನಂತರ) |
|---|---|---|
| 01 | ಹೊಸ ಸಂಯೋಜನೆಗಳು | 35 |
| 02 | ಸಂಯೋಜನೆಗಳ ನವೀಕರಣ/ ಮುಂದುವರಿಕೆ/ ವಿಸ್ತರಣೆ | 40 |
| 03 | ವಿದ್ಯಾರ್ಥಿಗಳ ಸಂಖ್ಯ ಹೆಚ್ಚಳ | 45 |
| 04 | ಹೊಸ ಕೋರ್ಸ್‌ಗಳ /ಹೊಸ ಕಾಂಬಿನೇಷನ್‌ಗಳ ಮಂಜೂರಾತಿ | 50 |
| 05 | ಹೊಸ ಶಾಶ್ವತ ಸಂಯೋಜನೆಗಳು | 55 |
| 06 | ಶಾಶ್ವತ ಸಂಯೋಜನೆಗಳ ನವೀಕರಣ | 65 |

3. **A Library area per student** ಮತ್ತು **Laboratory area per student** ಗಳಲ್ಲಿ 50% ರಿಯಾಯ್ತಿ ನೀಡಬಹುದಾಗಿದೆ.

4. 2020-21ನೇ ಸಾಲಿನಿಂದ ಹೊಸದಾಗಿ ಪ್ರಾರಂಭಿಸುವ ಕಾಲೇಜುಗಳ ಸಂಯೋಜನೆಗೆ ಶಿಫಾರಸ್ಸು ಮಾಡುವಾಗ ಸಂಯೋಜನಾ ಅಂಕಗಳಲ್ಲಿ (Affiliation Marks) ಕನಿಷ್ಠ 40 ಅಂಕಗಳನ್ನು ಪಡೆದಿರುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ನಿಗದಿತ ಮಾನದಂಡಗಳನ್ನು (Defined Parameters) ಪೂರೈಸತಕ್ಕದ್ದು.

5. 2021-22ರ ಸಂಯೋಜನೆಗೆ ಸಂಬಂಧಪಟ್ಟಂತೆ, ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾಲಯಗಳು ಸಂಯೋಜನಾ ಪ್ರಕ್ರಿಯೆಯನ್ನು ನಡೆಸಿ, ಶಿಫಾರಸ್ಸುಗಳನ್ನು ಆನ್‌ಲೈನ್ ಮುಖಾಂತರ ಸರ್ಕಾರಕ್ಕೆ ಕಳುಹಿಸುವುದು.

6. ಈ ವಿಚಾರದಲ್ಲಿ ಒಂದು ಬಾರಿಯ ಕ್ರಮವಾಗಿ ಸಂಯೋಜನಾ ಅಂಕ (Affiliation Score) ಗಳಲ್ಲಿ ಶೇ.5 ರಷ್ಟು ಅಂಕಗಳ ರಿಯಾಯಿತಿ ನೀಡಿ, ಮೇಲಿನ 2ನೇ ಕಂಡಿಕೆಯ ಪಟ್ಟಿಯಲ್ಲಿ ನೀಡಿರುವಂತೆ ಸಂಯೋಜನಾ ಅಂಕಗಳ ಆಧಾರದ ಮೇಲೆ ಶಿಫಾರಸ್ಸು ಮಾಡುವುದು.

7. ಈ ಹಿಂದಿನ ವರ್ಷಗಳಲ್ಲಿ ಸಂಯೋಜನೆಯಾಗಿರುವ ಕಾಲೇಜುಗಳು, ಪ್ರಸಕ್ತ ಸಾಲಿನಲ್ಲಿ Defined Parameters ನ 8 ಅಂಶಗಳನ್ನು ಪೂರ್ಣಗೊಳಿಸದೆ ಇದ್ದರೆ, ಮುಂದಿನ 2 ವರ್ಷಗಳಲ್ಲಿ Defined Parameters ಗಳನ್ನು ಪೂರ್ಣಗೊಳಿಸುವ ನಿಬಂಧನೆಗೆ ಒಳಪಡಿಸಿ ಸಂಯೋಜನೆಯನ್ನು ನೀಡಬಹುದು ಹಾಗೂ ಸದರಿ ಕಾಲೇಜುಗಳಿಗೆ ಯಾವುದೇ ಹೊಸ ಕೋರ್ಸ್ / ಕಾಂಬಿನೇಷನ್ ಅನ್ನು ನೀಡತಕ್ಕದ್ದಲ್ಲ.

8. ಸಂಯೋಜನೆ ಪಡೆದ ಕಾಲೇಜುಗಳು ಎರಡು ವರ್ಷದ ನಂತರ ಕನಿಷ್ಠ 40 ಸಂಯೋಜನಾ ಅಂಕಗಳನ್ನು ಗಳಿಸದಿದ್ದಲ್ಲಿ ಮತ್ತು ಭೂಮಿಯೂ ಸೇರಿದಂತೆ Defined Parameters ಗಳನ್ನು ಪೂರ್ಣಗೊಳಿಸದ ಪಕ್ಷದಲ್ಲಿ, ಪ್ರಥಮ ವರ್ಷದ ಪದವಿಗಳಿಗೆ ಪ್ರವೇಶಾತಿಯನ್ನು ನಿಷಿದ್ಧಗೊಳಿಸುವುದು. ಅಂತಹ ಸಂದರ್ಭಗಳಲ್ಲಿ ದ್ವಿತೀಯ ಮತ್ತು ತೃತೀಯ ಪದವಿ ವಿದ್ಯಾರ್ಥಿಗಳು, ತಮ್ಮ ಅಂತಿಮ ಪದವಿ ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಆ ಕಾಲೇಜುಗಳನ್ನು ನಡೆಸಲು ಅವಕಾಶ ಕಲ್ಪಿಸುವುದು. ನಂತರ ಆ ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸುವುದು.

9. ಎಲ್ಲಾ ವಿದ್ಯಾರ್ಥಿಗಳೂ ಏಕಕಾಲದಲ್ಲಿ ಗ್ರಂಥಾಲಯದಲ್ಲಿ ಇರುವುದಿಲ್ಲವಾದ ಕಾರಣ ಮತ್ತುವಿದ್ಯಾರ್ಥಿಗಳು ಪ್ರಯೋಗಾಲಯಗಳನ್ನು ತಂಡಗಳಲ್ಲಿ ಉಪಯೋಗಿಸುವುದರಿಂದ, ಗ್ರಂಥಾಲಯಗಳಿಗೆ ಮತ್ತು ಪ್ರಯೋಗಾಲಯಗಳಿಗೆ ನಿಗಧಿಪಡಿಸಿದ ಸ್ಥಳಗಳ ವಿಸ್ತೀರ್ಣಗಳಲ್ಲಿ 50% ರಿಯಾಯಿತಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶೀತಲ್.ಎಂ.ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1)

ಪ್ರತಿಯನ್ನು:-

1) ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3) ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
4) ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
5) ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
6) ಹಣಕಾಸು ಅಧಿಕಾರಿ, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
7) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:-

1) ಉಪಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.

## ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 29 ಯುಎನ್ಇ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:16.02.2021

### ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ:ಇಡಿ 29 ಯುಎನ್ಇ 2021, ದಿನಾಂಕ:12.02.2021 ರ ಆದೇಶ ಭಾಗದ ಕ್ರಮ ಸಂಖ್ಯೆ:4 ರಲ್ಲಿನ 2 ನೇ ಸಾಲಿನಲ್ಲಿರುವ "ಸಂಯೋಜನಾ ಅಂಕಗಳಲ್ಲಿ (Affiliation Marks) ಕನಿಷ್ಠ 40 ಅಂಕಗಳನ್ನು" ಎಂಬುದರ ಬದಲಾಗಿ "ಸಂಯೋಜನಾ ಅಂಕಗಳಲ್ಲಿ (Affiliation Marks) ಕನಿಷ್ಠ 35 ಅಂಕಗಳನ್ನು" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶೀತಲ್.ಎಂ.ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1)

ಪ್ರತಿಯನ್ನು:-

1) ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3) ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
4) ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
5) ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
6) ಹಣಕಾಸು ಅಧಿಕಾರಿ, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
7) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:-

1) ಉಪಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 384 ಯುಎನ್‌ಇ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 18.02.2022.

**ಸುತ್ತೋಲೆ**

ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿನ ಹೊಸ ಕಾಲೇಜುಗಳ / ಹೊಸ ಕೋರ್ಸುಗಳ / ಪ್ರವೇಶ ಸಂಖ್ಯೆಯ ಹೆಚ್ಚಳ / ಸಂಯೋಜನೆ ಮುಂದುವರಿಕೆ/ ನವೀಕರಣ / ಸ್ಥಳ ಬದಲಾವಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ, ಯುಜಿಸಿ ರೆಗ್ಯುಲೇಷನ್‌ಗಳಲ್ಲಿ ಆಯಾ ಕಾಲೇಜುಗಳು ಹೊಂದಿರಬೇಕಾದ ಕನಿಷ್ಠ ಜಮೀನಿನ ಅರ್ಹತೆಗಳ ಬಗ್ಗೆ ಕೆಲವು ಬದಲಾವಣೆಗಳು ಅಗತ್ಯವೆಂದು ಪರಿಗಣಿಸಿ, ಹೊಸ ಕಾಲೇಜುಗಳ / ಹೊಸ ಕೋರ್ಸುಗಳ / ಪ್ರವೇಶ ಸಂಖ್ಯೆಯ ಹೆಚ್ಚಳ / ಸಂಯೋಜನೆ ಮುಂದುವರಿಕೆ/ ನವೀಕರಣ / ಸ್ಥಳ ಬದಲಾವಣೆ ಇತ್ಯಾದಿಗಳ ಬಗ್ಗೆ, ಸರ್ಕಾರದ ಸಹಮತಿಗಾಗಿ ವಿಶ್ವವಿದ್ಯಾಲಯಗಳು ಕಳುಹಿಸುವ ಪ್ರಸ್ತಾವನೆಗಳಲ್ಲಿ ಆಯಾ ಸಂಸ್ಥೆ ಕಾಲೇಜುಗಳು ಹೊಂದಿರಬೇಕಾದ ಕನಿಷ್ಠ ವಿಸ್ತೀರ್ಣದ ಜಮೀನಿನ ಮಿತಿಯನ್ನು ಕೆಳಗಿನಂತೆ ಪರಿಷ್ಕರಿಸಿ, ಸೂಕ್ತ ಮಾನದಂಡಗಳನ್ನು ಅನುಸರಿಸಲು ಸೂಚಿಸಿದೆ.

**ಮಾನದಂಡಗಳು:-**

1. The college/institution shall hold undisputed ownership and possession of land free from any or all encumbrances, measuring.

   a. Not less than 0.5 acres if it is located in mega cities.
   b. 1 acre if it is located in BMRDA, city corporations and district head quarters.
   c. 1.5 acres if it is located in Municipalities or taluk head quarters.
   d. 3 acres if it is any other rural areas.

   Provided that these requirements shall not apply to colleges already affiliated to the university prior to the date of notification of UGC. (Affiliation of colleges by the universities) Regulations 2009 and its amendments in 2012, **only if the existing programmes and intake of students are not altered.**

2. The registered society/trust in justified exceptional cases may be allowed to start the college for the 1st year of the programs in a readily available building, provided the institute should have the required land at the place proposed to establish the college on a permanent basis as per para 1 above.

3. In the bond to be executed by the registered society/trust it shall be mentioned that after the college is affiliated, the same will not be shifted to different location or will not be transferred to a different society, Trust, individual or a group of individuals without the prior approval of the University, provided in the new place proposed for shifting the college, the minimum land required under para 1 above shall be ensured.

ಸದರಿ ಜಮೀನು ಆಯಾ ಸಂಸ್ಥೆ ಅಥವಾ ಕಾಲೇಜಿನ ಹೆಸರಿನಲ್ಲಿದೆಯೇ ಎಂಬುದಕ್ಕೆ ಕೆಳಕಂಡ ದಾಖಲಾತಿಗಳನ್ನು ಕಳುಹಿಸತಕ್ಕದ್ದು:-

1 ಸದರಿ ಜಮೀನಿನ ಪಹಣಿ ಅಥವಾ ಮುನಿಸಿಪಾಲಿಟಿ/ಕಾರ್ಪೋರೇಷನ್ ಗಳಿಂದ ಪಡೆದ ಇತ್ತೀಚಿನ ಖಾತಾ ನಕಲು

**ಅಥವಾ**

ಸದರಿ ಜಮೀನನ್ನು ಸಂಸ್ಥೆಯ/ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೊಂದಾಯಿತವಾಗಿರುವ (ಎ) ಕ್ರಯಪತ್ರ ಅಥವಾ (ಬಿ) 30 ವರ್ಷಗಳಿಂದ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ (ಸಿ) ದಾನಪತ್ರ.

ಹೊಸ ಕಾಲೇಜುಗಳ ಸ್ಥಾಪನೆ, ಹೊಸ ಕೋರ್ಸುಗಳ ಪ್ರಾರಂಭ, ಪ್ರವೇಶ ಸಂಖ್ಯೆಯ ಹೆಚ್ಚಳ, ಸಂಯೋಜನೆ ಮುಂದುವರಿಕೆ/ನವೀಕರಣ, ಸ್ಥಳ/ಹೆಸರು ಬದಲಾವಣೆ ಇತ್ಯಾದಿಗಳ ಸಂಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂ. ಇಡಿ 29 ಯುಎನ್‌ಇ 2021, ದಿನಾಂಕ:12.02:2021 ಹಾಗೂ 16.02.2021ರ ಆದೇಶಗಳ ಜೊತೆಗೆ ಕಾಲೇಜುಗಳ ಜಮೀನಿನ ವಿಸ್ತೀರ್ಣದ ಕುರಿತಂತೆ ಮೇಲ್ಕಂಡ ಮಾನದಂಡಗಳನ್ನು ಯಥಾವತ್ತಾಗಿ ಪಾಲಿಸುವುದು. ಒಂದು ವೇಳೆ ಈ ಮಾನದಂಡಗಳಲ್ಲಿ ವಿಧಿಸಿದ ಜಮೀನಿನ ವಿಸ್ತೀರ್ಣ ಕನಿಷ್ಠ ಮಿತಿಗಿಂತ ಕಡಿಮೆ ಇದ್ದಲ್ಲಿ, ಅಂತಹ ಪ್ರಸ್ತಾವನೆಯನ್ನು ಅನುಮೋದನೆಗೆ ಶಿಫಾರಸ್ಸು ಮಾಡತಕ್ಕದ್ದಲ್ಲ.

**(ಶೀತಲ್ ಎಂ. ಹಿರೇಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

ಗ:

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2. ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
3. ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
4. ಹಣಕಾಸು ಅಧಿಕಾರಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
6. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯಗಳು-2), ಬಹುಮಹಡಿಗಳ ಕಟ್ಟಡ, ಬೆಂಗಳೂರು.

4558
-3 SEP 2020

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 218 ಯುಎನ್ಇ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 24.08.2020.

## ಸುತ್ತೋಲೆ

ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಣ ಸಂಸ್ಥೆಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಪಿಟಿಶನ್ ಸಂಖ್ಯೆ: 483/2004, ದಿನಾಂಕ:13.04.2009ರ ತೀರ್ಪಿನನ್ವಯ ಹೊಸ ಖಾಸಗಿ ಶಾಲೆಗಳಿಗೆ ನೋಂದಣಿ, ಮಾನ್ಯತೆ, ಮಾನ್ಯತೆ ನವೀಕರಣ ಮತ್ತು ಸಂಯೋಜನೆ ನೀಡುವ ಪೂರ್ವದಲ್ಲಿ ಶಾಲಾ ಆಡಳಿತ ಮಂಡಳಿಗಳಿಂದ ಶಾಲಾ ಕಟ್ಟಡವನ್ನು ಭಾರತದ ರಾಷ್ಟ್ರೀಯ ಕಟ್ಟಡ ಸಂಹಿತೆಯಲ್ಲಿನ NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆ ಕುರಿತು ಸಕ್ಷಮ ಪ್ರಾಧಿಕಾರದಿಂದ ಪಡೆದ ಧೃಡೀಕರಣ ಹಾಗೂ ಅಗ್ನಿನಂದಕ ಉಪಕರಣಗಳನ್ನು ಅಳವಡಿಸಿ, ತುರ್ತು ಪರಿಸ್ಥಿತಿಯಲ್ಲಿ ಸದರಿ ಉಪಕರಣದ ಬಳಕೆ ಕುರಿತು ತರಬೇತಿ ಪಡೆದಿರುವ ಬಗ್ಗೆ ಧೃಢೀಕರಣ ಮತ್ತು ಶಾಲೆಯ ಆವರಣವು ಎಲ್ಲಾ ರೀತಿಯ ಅಗ್ನಿ ದುರಂತಗಳಿಂದ ಹಾಗೂ ವಿಷಯುಕ್ತ ಪದಾರ್ಥಗಳಿಂದ ಮುಕ್ತಿ ಹೊಂದಿರುವ ಬಗ್ಗೆ ಧೃಢೀಕರಿಸುವುದು ಎಂದು ನಿರ್ದೇಶನವನ್ನು ನೀಡಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಹಾಗೂ ಸರ್ಕಾರದ ಮಾರ್ಗಸೂಚಿಯಂತೆ, ಇನ್ನು ಮುಂದೆ ಖಾಸಗಿ/ಸರ್ಕಾರಿ ಕಾಲೇಜು ಕಟ್ಟಡಗಳು ಸಧೃಡತೆ/ಸುರಕ್ಷತೆ ಕುರಿತು National Building Code-2016 ರ ನಿಯಮಾನುಸಾರ ಹಾಗೂ Fire Services Department ನಿಂದ (Compliance certificate) ಧೃಢೀಕರಣ ಪತ್ರಗಳನ್ನು ಪಡೆಯುವುದು ಕಡ್ಡಾಯವಾಗಿರುವುದರಿಂದ, ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಲೋಕೋಪಯೋಗಿ ಇಲಾಖೆ ಪರಿವೀಕ್ಷಣೆ ನಡೆಸಿ ಖಚಿತಪಡಿಸಿಕೊಳ್ಳತಕ್ಕದ್ದು.

ಹೊಸ ಕಾಲೇಜು ಸ್ಥಾಪಿಸಲು ಉದ್ದೇಶಿಸಿ, ಸಂಯೋಜನೆ ಕೋರಿ ಸಲ್ಲಿಸಲಾಗುವ ಅರ್ಜಿಗಳನ್ನು ವಿಶ್ವವಿದ್ಯಾಲಯಗಳು ಸ್ವೀಕರಿಸಿದ ನಂತರ, NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆ ಮತ್ತು Fire Services Department ನಿಂದ Compliance Certificates ಗಳನ್ನು ಪಡೆದಿರುವುದನ್ನು ಧೃಢಪಡಿಸಿಕೊಂಡು ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು. ಸಂಯೋಜನಾ

RECEIVED AT THE OFFICE
-2 SEP 2020



-2 SEP 2020

ಅರ್ಜಿಯೊಂದಿಗೆ ಮೇಲ್ಕಂಡ ಸುರಕ್ಷತಾ ಪ್ರಮಾಣ ಪತ್ರಗಳ ಸಲ್ಲಿಕೆಯನ್ನು ವಿಶ್ವವಿದ್ಯಾಲಯಗಳು ಆಗತ್ಯಪಡಿಸತಕ್ಕದ್ದು. ಕಟ್ಟಡ ಸುರಕ್ಷತಾ ಪ್ರಮಾಣ ಪತ್ರಗಳ ರಹಿತವಾಗಿ ಸಲ್ಲಿಸಲಾಗುವ ಹೊಸ ಸಂಯೋಜನಾ ಅರ್ಜಿಗಳನ್ನು ವಿಶ್ವವಿದ್ಯಾಲಯಗಳು ಪರಿಗಣಿಸತಕ್ಕದ್ದಲ್ಲ. ಲೀಸ್ ಮೇಲೆ ಪಡೆದ ಕಟ್ಟಡಗಳಿಗೂ ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಕಾಲೇಜುಗಳು ಸ್ಥಳಾಂತರಗೊಳ್ಳಲು ಉದ್ದೇಶಿಸಿರುವ ಕಟ್ಟಡಗಳಿಗೂ ಈ ನಿಬಂಧನೆಯು ಅನ್ವಯಿಸುತ್ತದೆ.

National Building Code of India ದ ಸುರಕ್ಷಾ ಹಾಗೂ Fire safety ಮಾನದಂಡಗಳನ್ನು ಪಾಲಿಸದಿರುವುದು ಕಂಡುಬಂದಲ್ಲಿ. ಸಂಬಂಧಿಸಿದವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

Sheetal M. Hiremath

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

ಗೆ:

1. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, 3ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
4. ಮುಖ್ಯ ಇಂಜಿನಿಯರ್, (ಸಂಪರ್ಕ ಮತ್ತು ಕಟ್ಟಡಗಳು) ದಕ್ಷಿಣ, ಬೆಂಗಳೂರು.
5. ಮುಖ್ಯ ಇಂಜಿನಿಯರ್, (ಸಂಪರ್ಕ ಮತ್ತು ಕಟ್ಟಡಗಳು) ಉತ್ತರ, ಧಾರವಾಡ
6. ಮುಖ್ಯ ಇಂಜಿನಿಯರ್, (ಸಂಪರ್ಕ ಮತ್ತು ಕಟ್ಟಡಗಳು) ಈಶಾನ್ಯ, ಕಲ್ಬುರ್ಗಿ.
7. ಗೌರವಾನ್ವಿತ ರಾಜ್ಯಪಾಲರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
8. ವಿಶೇಷಾಧಿಕಾರಿಗಳು, ಇ-ಆಡಳಿತ ಘಟಕ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು
9. ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು-560056.
10. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-570005.

11. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ-580033.
12. ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ-577451.
13. ಕುಲಸಚಿವರು, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರಗಿ-585106.
14. ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು-574199.
15. ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-572101.
16. ಕುಲಸಚಿವರು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ - 583276.
17. ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
18. ಕುಲಸಚಿವರು, ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ.
19. ಕುಲಸಚಿವರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ.
20. ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾವಿ.
21. ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು-570006.
22. ಕುಲಸಚಿವರು, ಕರ್ನಾಟಕ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ-586101.
23. ಕುಲಸಚಿವರು, ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾನಿಲಯ, ಚಾಮರಾಜಪೇಟೆ, ಬೆಂಗಳೂರು.
24. ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಗೊಟಗೋಡಿ, ಶಿಗ್ಗಾವಿ ತಾಲ್ಲೂಕು, ಹಾವೇರಿ ಜಿಲ್ಲೆ.
25. ಕುಲಸಚಿವರು, ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ, ಮೈಸೂರು.
26. ಕುಲಸಚಿವರು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಶ್ರೀ ದೇವರಾಜ ಅರಸು ಬಡಾವಣೆ ಕೋಲಾರ.
27. ಕುಲಸಚಿವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಸೆಂಟ್ರಲ್ ಕಾಲೇಜು ಆವರಣ ಬೆಂಗಳೂರು.
28. ಎಲ್ಲಾ ಖಾಸಗಿ ವಿಶ್ವವಿದ್ಯಾನಿಲಯಗಳ ಕುಲಪತಿಗಳು- ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು, ಇವರ ಮೂಲಕ.